# ಫಾಸ್ಟ್ಯಾಗ್: ಏಕೆ? ಹೇಗೆ?

■ ಶಶಿಕುಮಾರ್ ಸಿ.




ಹೆದ್ದಾರಿಗಳಲ್ಲಿನ ಟೋಲ್ ಸಂಗ್ರಹ ಕೇಂದ್ರಗಳ ಮೂಲಕ ಹಾದುಹೋಗುವ ವಾಹನಗಳಿಗೆ ಫಾಸ್ಟ್ಯಾಗ್ ಕಡ್ಡಾಯ ಎಂದು ಕೇಂದ್ರ ಸರ್ಕಾರದ ಭಾರತೀಯ ಸಾರಿಗೆ ಸಚಿವಾಲಯವು ಈಚೆಗಷ್ಟೇ ಘೋಷಣೆ ಮಾಡಿತ್ತು. ಈ ಆದೇಶದಿಂದ ವಾಹನ ಸವಾರರು ಹಾಗೂ ಟೋಲ್ ಸಿಬ್ಬಂದಿಯ ನಡುವೆ ವಾಗ್ವಾದಗಳು ದೇಶದಾದ್ಯಂತ ನಡೆಯುತ್ತಿವೆ. ವಾಹನ ಸವಾರರು ತಮ್ಮ ವಾಹನಗಳಿಗೆ ಫಾಸ್ಟ್ಯಾಗ್ ಅಳವಡಿಸಿಕೊಳ್ಳುವುದು ಅನಿವಾರ್ಯ. ಇಲ್ಲವಾದಲ್ಲಿ ನಿಗದಿತ ಶುಲ್ಕದ ದುಪ್ಪಟ್ಟು ಶುಲ್ಕವನ್ನು ಪಾವತಿಸಲೇಬೇಕಾಗುತ್ತದೆ.

ಫಾಸ್ಟ್ಯಾಗ್ ಟೋಲ್– ಸಂಗ್ರಹ ವ್ಯವಸ್ಥೆಯು RFID (ರೇಡಿಯೋ ಫ್ರೀಕ್ವೆನ್ಸಿ ಐಡೆಂಟಿಫಿಕೇಶನ್) ತಂತ್ರಜ್ಞಾನವನ್ನು ಆಧರಿಸಿದ್ದು, ಫೆ.15ರಿಂದ ಟೋಲ್‌ಗಳಲ್ಲಿ ಕಡ್ಡಾಯ ನಿಯಮ ಜಾರಿಯಾಗಿದೆ.

## ಇದ್ದರೂ ಸಮಸ್ಯೆ ತಪ್ಪಿದ್ದಲ್ಲ!

ಫಾಸ್ಟ್‌ಟ್ಯಾಗ್ ಅಳವಡಿಸಿಕೊಂಡ ಬಳಿಕ ತಮ್ಮ ಜವಾಬ್ದಾರಿ ಮುಗಿಯಿತು ಎಂದು ಸಾಕಷ್ಟು ವಾಹನ ಸವಾರರು ಅಂದುಕೊಳ್ಳುತ್ತಾರೆ. ಹಾಗಂದುಕೊಂಡು ಫಾಸ್ಟ್ಯಾಗ್‌ನಲ್ಲಿನ ಬ್ಯಾಲೆನ್ಸ್ ಮೇಲೆ ನಿಗಾವಹಿಸಿದ್ದರೆ ನಿಮ್ಮ ಅಕೌಂಟ್ ಬ್ಲಾಕ್‌ಲಿಸ್ಟ್‌ಗೆ ಸೇರುವ ಸಾಧ್ಯತೆಯೂ ಇದೆ.

ಟ್ಯಾಗ್ ಅಳವಡಿಸಿಕೊಂಡ ನಂತರ ಖಾತೆಯಲ್ಲಿ ಸಾಕಷ್ಟು ಹಣ ಇರುವಂತೆ ನೋಡಿಕೊಳ್ಳುವುದು ಬಹುಮುಖ್ಯ. ಖಾತೆಯಲ್ಲಿನ ಬ್ಯಾಲೆನ್ಸ್ ಬಗ್ಗೆ ಅರಿವಿಲ್ಲದಿದ್ದರೆ ಬ್ಯಾಲೆನ್ಸ್ ಇಲ್ಲದ ಕಾರಣಕ್ಕೆ ನಿಮ್ಮ ಖಾತೆಯನ್ನು ಬ್ಲ್ಯಾಕ್‌ಲಿಸ್ಟ್‌ಗೆ ಹಾಕಬಹುದು. ಅದರ ಜೊತೆಗೆ ದಂಡ ಪಾವತಿಸಬೇಕಾಗುತ್ತದೆ.

ಜನವರಿ 1ರಿಂದಲೇ ಟೋಲ್‌ಗಳಲ್ಲಿ ಫಾಸ್ಟ್ಯಾಗ್ ಕಡ್ಡಾಯಗೊಳಿಸಲಾಗಿತ್ತು. ಆದರೆ, ಈ ಬಗ್ಗೆ ಹೆಚ್ಚು ಜನರಿಗೆ ಮಾಹಿತಿ ಇಲ್ಲದ ಕಾರಣಕ್ಕೆ ರಾಷ್ಟ್ರೀಯ ಹೆದ್ದಾರಿಗಳ ಟೋಲ್‌ನಲ್ಲಿ ಫಾಸ್ಟ್ಯಾಗ್ ಕಡ್ಡಾಯ ಮಾಡುವ ಡೆಡ್‌ಲೈನ್ ಅನ್ನು ಫೆ. 15ರವರೆಗೆ ವಿಸ್ತರಿಸಲಾಗಿತ್ತು.

## ಬ್ಯಾಲೆನ್ಸ್ ಚೆಕ್ ಮಾಡುವುದು ಹೇಗೆ?

ಬ್ಯಾಲೆನ್ಸ್ ಚೆಕ್ ಮಾಡುವುದು ತುಸು ತ್ರಾಸದ ಕೆಲಸ. ನಿಗದಿತ ಅಪ್ಲಿಕೇಷನ್ ಬಳಸಬೇಕು.

ಟ್ಯಾಗ್‌ನಲ್ಲಿ ಹಣವಿದ್ದರೆ ಹೆದ್ದಾರಿಗಳಲ್ಲಿನ ಟೋಲ್‌ಗಳಲ್ಲಿ ಸಕ್ರಿಯಗೊಳಿಸಲಾದ ETC (ಎಲೆಕ್ಟ್ರಾನಿಕ್ ಟೋಲ್ ಕಲೆಕ್ಷನ್) ಅನ್ನು ವಾಹನ ದಾಟಿದಾಗ ಟೋಲ್ ಹಣವನ್ನು ವಾಹನಕ್ಕೆ ಸಂಬಂಧಿಸಿದ ಡಿಜಿಟಲ್ ವ್ಯಾಲೆಟ್‌ನಿಂದ ನೇರವಾಗಿ ಕಡಿತಗೊಳಿಸಲಾಗುತ್ತದೆ. ಸ್ಮಾರ್ಟ್‌ಫೋನ್‌ಗಳಲ್ಲಿನ ಡಿಜಿಟಲ್ ಯುಪಿಐ (UPI) ಅಪ್ಲಿಕೇಷನ್‌ಗಳು ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (NHAI) ಅಪ್ಲಿಕೇಷನ್ ಮೂಲಕ ಆನ್‌ಲೈನ್‌ನಲ್ಲಿ ಫಾಸ್ಟ್ಯಾಗ್ ಬ್ಯಾಲೆನ್ಸ್ ಅನ್ನು ಚೆಕ್ ಮಾಡಬಹುದು.

ಬಳಕೆದಾರರು ಬ್ಯಾಂಕ್ ಪೋರ್ಟಲ್‌ಗಳು, ಸ್ಮಾರ್ಟ್‌ಫೋನ್‌ಗಳಲ್ಲಿನ ಡಿಜಿಟಲ್ UPI ಅಪ್ಲಿಕೇಷನ್‌ಗಳು ಮತ್ತು NHAI ಅಪ್ಲಿಕೇಷನ್ ಮೂಲಕ ಆನ್‌ಲೈನ್‌ನಲ್ಲಿ ಫಾಸ್ಟ್ಯಾಗ್ ಬ್ಯಾಲೆನ್ಸ್ ಅನ್ನು ಪರಿಶೀಲಿಸಬಹುದು.

ಬ್ಯಾಂಕ್ ನೀಡುವ ಫಾಸ್ಟ್ಯಾಗ್ ಬ್ಯಾಲೆನ್ಸ್ ಪರಿಶೀಲಿಸಲು ನೀವು ಆನ್‌ಲೈನ್‌ನಲ್ಲಿ ಮೀಸಲಾದ ಪೋರ್ಟಲ್‌ಗೆ ಭೇಟಿ ನೀಡಬೇಕು. ಬ್ಯಾಂಕ್ ಖಾತೆಗೆ ಲಾಗಿನ್ ಆಗಬೇಕು ಮತ್ತು ಬಾಕಿ ಪರಿಶೀಲಿಸಲು ಮುಖಪುಟದಿಂದ ಫಾಸ್ಟ್ಯಾಗ್ ಆಯ್ಕೆ ಕ್ಲಿಕ್ಕಿಸಿದರೆ ಮಾಹಿತಿ ಲಭ್ಯ.

## ಸ್ಮಾರ್ಟ್‌ಫೋನ್‌ನಲ್ಲಿ ಹೇಗೆ?

- NHAI ವಾಲೆಟ್ ಆಯ್ಕೆಯ ಮೂಲಕ ಚೆಕ್ ಮಾಡ ಬಯಸಿದರೆ, ನಿಮ್ಮ ಸ್ಮಾರ್ಟ್‌ಫೋನ್‌ಗಳಲ್ಲಿ ನೀವು ಅದನ್ನು ಮಾಡಬಹುದು. ಇದನ್ನು ಆ್ಯಂಡ್ರಾಯ್ಡ್ ಮತ್ತು ಐಒಎಸ್ ಸ್ಮಾರ್ಟ್‌ಫೋನ್‌ಗಳಲ್ಲಿ ಮಾಡಬಹುದು.
- ಗೂಗಲ್ ಪ್ಲೇ ಸ್ಟೋರ್ ತೆರೆಯಿರಿ ಮತ್ತು 'My FASTag' ಅಪ್ಲಿಕೇಷನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಿ.
- ನಿಮ್ಮ ಖಾತೆಯನ್ನು ಲಾಗ್ ಇನ್ ಮಾಡಿ. ನೀವು ಮೊದಲ ಬಾರಿಗೆ ಅಪ್ಲಿಕೇಷನ್ ಬಳಸುತ್ತಿದ್ದರೆ, ಈಗಾಗಲೇ ನೋಂದಾಯಿಸಿಕೊಂಡಿದ್ದೀರಿ ಎಂಬುದನ್ನು ಖಾತರಿಪಡಿಸಿಕೊಳ್ಳಿ.
- ಲಾಗಿನ್ ಯಶಸ್ವಿಯಾದ ನಂತರ, ಲಭ್ಯವಿರುವ ಬ್ಯಾಲೆನ್ಸ್ ಅನ್ನು ನೀವು ಕಾಣಬಹುದು.

## ಪೇಟಿಎಂನಲ್ಲಿ ಹೇಗೆ?

- ನಿಮ್ಮ ಸ್ಮಾರ್ಟ್‌ಫೋನ್‌ನಲ್ಲಿ Paytm ಅಪ್ಲಿಕೇಷನ್ ತೆರೆಯಿರಿ.
- ಬ್ಯಾಲೆನ್ಸ್ ಮತ್ತು ಹಿಸ್ಟರಿ ಆಯ್ಕೆಗೆ ಹೋಗಿ.
- ಪೇಟಿಎಂ ಬ್ಯಾಲೆನ್ಸ್ ಪಕ್ಕದಲ್ಲಿರುವ ಕೆಳಗಿರುವ ಗುರುತಿನ ಮೇಲೆ ಕ್ಲಿಕ್ ಮಾಡಿ. ಆ ನಂತರ ನೀವು ಫಾಸ್ಟ್ಯಾಗ್ಬ್ಯಾಲೆನ್ಸ್ ಅನ್ನು ನೀವು ಕಾಣಬಹುದು.
- ಏರ್‌ಟೆಲ್‌ನ ಫಾಸ್ಟ್ಯಾಗ್ ಆದರೆ ಅದರ ಅಪ್ಲಿಕೇಷನ ಅನ್ನು ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ಕಾಣುವ ಫಾಸ್ಟ್ಯಾಗ್ ಆಯ್ಕೆಯನ್ನು ಕ್ಲಿಕ್ ಮಾಡಿದರೆ ಸಾಕು. ನಂತರ ಕಾಣುವ ಬ್ಯಾಲೆನ್ಸ್ ವಿಭಾಗದಲ್ಲಿ ಬಾಕಿ ಹಣ ಮಾಹಿತಿ ಲಭ್ಯವಾಗುತ್ತದೆ.

■